**ಕರ್ನಾಟಕ ಸರ್ಕಾರ**

**(ಕೃಷಿ ಇಲಾಖೆ)**

**ಬೆಳೆ ವಿಮೆ ವಿಭಾಗ**

ಕೃಷಿ ಆಯುಕ್ತಾಲಯ, ಶೇಷಾದ್ರಿರಸ್ತೆ, ಬೆಂಗಳೂರು-560001. ದೂರವಾಣಿ ಸಂಖ್ಯೆ: 080-22074188

**ಅಧಿಸೂಚನೆ**

**ವಿಷಯ:** ಕೃಷಿ ಇಲಾಖೆಯ ಬೆಳೆ ವಿಮಾ ಯೋಜನೆಯಡಿ ಅನುಷ್ಠಾನಗೊಳಿಸಿರುವ ರಾಜ್ಯಮಟ್ಟದ ತಾಂತ್ರಿಕ ಉತ್ತೇಜನ ಘಟಕದಲ್ಲಿ ಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

*****

ಕೃಷಿ ಇಲಾಖೆಯ ಬೆಳೆ ವಿಮಾ ಯೋಜನೆಯಡಿ ಅನುಷ್ಠಾನಗೊಳಿಸಿರುವ ರಾಜ್ಯಮಟ್ಟದ ತಾಂತ್ರಿಕ ಉತ್ತೇಜನ ಘಟಕಕ್ಕೆ 2021-22ನೇ ಆರ್ಥಿಕ ಸಾಲಿನ ಅಂತ್ಯದವರೆಗೆ ಮಾತ್ರ ಷರತ್ತಿಗೆ ಒಳಪಟ್ಟು ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಹತೆ ಮತ್ತು ಅನುಭವವಿರುವ ಆಸಕ್ತ ಅಭ್ಯರ್ಥಿಗಳಿಂದ ಈ ಕೆಳಗಿನ ಹುದ್ದೆಗಳನ್ನು ತುಂಬಲು ಅರ್ಜಿಗಳನ್ನು ಆಹ್ವಾನಿಸಿದೆ.

| ಕ್ರ. ಸಂ. | ಹುದ್ದೆಯವಿವರ | ಹುದ್ದೆಯ ಸಂಖ್ಯೆ | | ಕ್ರ. ಸಂ. | ಹುದ್ದೆಯವಿವರ | ಹುದ್ದೆಯ ಸಂಖ್ಯೆ |
|---|---|---|---|---|---|---|
| 1. | ರಾಜ್ಯ ತಾಂತ್ರಿಕ ಘಟಕದ ಮುಖ್ಯಸ್ಥರು | 1 | | 6. | ದತ್ತಾಂಶ ವಿಶ್ಲೇಷಕರು | 1 |
| 2. | ಕಾರ್ಯಕ್ರಮ ಸಂಯೋಜಕರು | 1 | | 7. | ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ತಜ್ಞರು | 1 |
| 3. | ಸಂವಹನ ಅಧಿಕಾರಿ | 1 | | 8. | ತೋಟಗಾರಿಕಾ ತಜ್ಞರು | 1 |
| 4. | ಸಾಮರ್ಥ್ಯವೃದ್ಧಿಅಧಿಕಾರಿ | 1 | | 9. | ಗುಮಾಸ್ತ | 1 |
| 5. | ಮಾಹಿತಿ ತಂತ್ರಜ್ಞಾನ ಮತ್ತು ನಿರ್ವಹಣಾ ವ್ಯವಸ್ಥೆ ತಜ್ಞರು | 1 | | 10. | ಡೇಟಾ ಎಂಟ್ರಿ ಆಪರೇಟರ್ | 1 |

ಹುದ್ದೆಗಳಿಗೆ ತತ್ಸಮಾನ ವಿದ್ಯಾರ್ಹತೆ ಹಾಗೂ ಅನುಭವವುಳ್ಳ ಅರ್ಹ ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ನಿಗಧಿತ ಅರ್ಜಿ ನಮೂನೆಯಲ್ಲಿ ನೇರವಾಗಿ ಅಥವಾ ಅಂಚೆಯ ಮೂಲಕ ಅರ್ಜಿಯನ್ನೊಳಗೊಂಡ ಲಕೋಟೆಯ ಮೇಲೆ ಹುದ್ದೆಯ ವಿವರವನ್ನು ನಮೂದಿಸಿ ಕೃಷಿ ಆಯುಕ್ತರು, ಕೃಷಿ ಆಯುಕ್ತಾಲಯ, ಶೇಷಾದ್ರಿರಸ್ತೆ, ಬೆಂಗಳೂರು-560001 ರವರಿಗೆ ಅಥವಾ ಭರ್ತಿಮಾಡಿದ ಅರ್ಜಿಯೊಂದಿಗೆ ಎಲ್ಲಾ ಮೂಲ ಪ್ರಮಾಣ ಪತ್ರಗಳು ಮತ್ತು ಅನುಭವ ಕುರಿತು ಸ್ಕ್ಯಾನ್ ಮಾಡಿ (pdf format) ನಲ್ಲಿ e-mail I.D.: stsuagri2020@gmail.com ಗೆ ದಿನಾಂಕ:**17-05-2021 ;** ಸಮಯ: **ಸಂಜೆ 4.00 ಗಂಟೆಯೊಳಗೆ** ತಲುಪಿಸುವುದು. ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿಯನ್ನು ಸಲ್ಲಿಸುವುದು. ಸಂಕ್ಷಿಪ್ತ/ಕಿರುಪಟ್ಟಿಯಲ್ಲಿ ಅರ್ಹತೆಯುಳ್ಳ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ದಿನ ಭತ್ಯೆ ಮತ್ತು ಪ್ರವಾಸ ಭತ್ಯೆಯನ್ನು ನೀಡಲಾಗುವುದಿಲ್ಲ. ಅರ್ಜಿ ನಮೂನೆ ಮತ್ತು ಇತರೆ ಮಾಹಿತಿಗಾಗಿ ಮೇಲಿನ ವಿಳಾಸ ಅಥವಾ ಇಲಾಖೆಯ ಜಾಲತಾಣ/ ವೆಬ್ ಸೈಟ್ https://raitamitra.karnataka.gov.in (ಪ್ರಕಟಣೆ) ನಲ್ಲಿ ಪಡೆಯುವುದು.

ಸಹಿ/-

ಕೃಷಿ ಆಯುಕ್ತರು.